# ಪುರುಷಾಯತ್ತ

ನಾವು ಆಗಾಗ್ಗೆ 'ಪುರುಷ ಪ್ರಯತ್ನ' ಎಂಬ ಮಾತನ್ನು ಬಳಸುತ್ತಿರುತ್ತೇವೆ. ಇದು ಪುರುಷನ ಆಧಿಕ್ಯವನ್ನು ಸೂಚಿಸುತ್ತಿದ್ದರೂ ಆತನ ನಿರಂತರ ಯತ್ನವನ್ನು ಮಾತ್ರ ಸೂಚಿಸುತ್ತದೆ. ಮನುಷ್ಯ ಸದಾ ಪ್ರಯತ್ನಶೀಲನಷ್ಟೆ. ಮನುಷ್ಯನಿಗೆ ಐದು ಇಂದ್ರಿಯಗಳ ಬಲವುಂಟು. ಈ ಐದು ಇಂದ್ರಿಯಗಳ ಮೂಲಕವೇ ಎಲ್ಲಾ ಬಗೆಯ ಪ್ರಯತ್ನಗಳನ್ನು ಅವನು ಮಾಡುತ್ತಿರುತ್ತಾನೆ. ನಮ್ಮ ಸಾಹಿತ್ಯಕೃತಿಗಳು ಪುರುಷನು ಕಂಡುಕೊಂಡ ಸತ್ತ್ವವನ್ನೂ ದಿಟ್ಟವಾಗಿ ಚಿತ್ರಿಸಿರುವುದುಂಟು. ಈ ಬಗೆಯನ್ನು ಪ್ರಾಚೀನರು 'ಪುರುಷಾಯತ್ತ' ಎಂಬ ಪರಿಕಲ್ಪನೆಯಿಂದ ಕಂಡುಕೊಂಡದ್ದುಂಟು. ಶ್ರೀರಾಮ–ಶ್ರೀಕೃಷ್ಣ ಇವರು ಪುರುಷಪ್ರಯತ್ನ ಅಥವಾ ಪುರುಷರು ತಂದುಕೊಂಡದ್ದನ್ನು ಪಾತ್ರಗಳ ಮೂಲಕ ಆಯಾ ಕವಿಗಳು ಚಿತ್ರಿಸಿದ್ದಾರೆ. ಶ್ರೀರಾಮನು ಸೀತೆಯನ್ನು ಹುಡುಕುವ ಪ್ರಯತ್ನಕ್ಕೆ ಕೈಹಾಕಿದಾಗ ಸುಗ್ರೀವ–ಆಂಜನೇಯ ಮುಂತಾದವರ ನೆರವು ದೊರಕಿದ್ದು ಸರಿಯಷ್ಟೆ. ಅವರ ನೆರವಿನಿಂದ 'ಸೇತುಬಂಧ'ವೂ ಆಯಿತು. ರಾವಣನನ್ನು ಕೊಂದು ಸೀತೆಯನ್ನು ಮರಳಿ ಪಡೆದಿದ್ದಾಯಿತು! ಇದೂ ಕೂಡ ಪುರುಷಾಯತ್ತದ ಫಲ!

ಮನುಷ್ಯನ ಛಲ, ಸತ್ತ್ವ, ಆಕಾಂಕ್ಷೆ ಮತ್ತು ಅಭೀಪ್ಸೆಗಳು ಪುರುಷಾಯತ್ತಕ್ಕೆ ಕಾರಣವೆಂಬುದನ್ನು ಜಗತ್ತಿನಲ್ಲಿ ನಡೆದ ವಿದ್ಯಮಾನಗಳು ನಮ್ಮ ಗಮನಕ್ಕೆ ತಂದುಕೊಟ್ಟಿವೆ. ಚರಿತ್ರೆಯ ಸಂಕಥನಗಳು ಇದನ್ನು ನಿಜಗೊಳಿಸಿವೆ. ಅಶೋಕನು ರಾಜ್ಯವಿಸ್ತಾರ ಮಾಡುತ್ತಲೇ ಅದನ್ನು ಕೈಬಿಟ್ಟು ಬುದ್ಧದರ್ಶನವನ್ನು ಒಪ್ಪಿಕೊಂಡು 'ಬುದ್ಧಂ ಶರಣಂ ಗಚ್ಛಾಮಿ' ಎಂಬ ಸಾರ್ವಕಾಲಿಕ ತತ್ತ್ವವನ್ನು 'ಪುರುಷಾಯತ್ತ'ದ ಫಲವಾಗಿ ಪಡೆದಿದ್ದನ್ನು ಈ ಹಿನ್ನೆಲೆಯಲ್ಲಿ ನಾವು ಗಮನಿಸಬೇಕು. ಇಮ್ಮಡಿ ಪುಲಕೇಶಿಯು ಹರ್ಷನನ್ನು ಹಿಮ್ಮೆಟ್ಟಿಸಿ 'ಉತ್ತರಾಪಥ ಚಕ್ರವರ್ತಿ' ಎನಿಸಿಕೊಂಡದ್ದಾಗಲಿ; ರಾಷ್ಟ್ರಕೂಟ ಚಕ್ರವರ್ತಿಗಳಲ್ಲಿ ಎರಡನೆಯ ಕೃಷ್ಣನು ಉತ್ತರಭಾರತದ ಬಹುಭಾಗವನ್ನು ಆಕ್ರಮಿಸಿಕೊಂಡು 'ಕರ್ನಾಟಕಪಥ'ವನ್ನು ವಿಸ್ತರಿಸಿದ್ದಾಗಲಿ ಕಡಿಮೆ ಸಾಧನೆಯೇನೂ ಅಲ್ಲ. ಆಧುನಿಕ ಕಾಲದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರು ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣದ ಭಾಗವಾದದ್ದಾಗಲಿ; ಬೆಂಗಳೂರಿಗೆ ಮೊತ್ತ ಮೊದಲ ಬಾರಿಗೆ ವಿದ್ಯುಚ್ಛಕ್ತಿಯನ್ನು ತಂದದ್ದಾಗಲಿ; ಜೋಗ ಜಲಪಾತವನ್ನು ವಿದ್ಯುಚ್ಛಕ್ತಿಗೊಳಪಡಿಸಿದ್ದಾಗಲಿ 'ಪುರುಷಾಯತ್ತ'ದ ಫಲವೆಂದರೆ ತಪ್ಪೇನು?

ನಾವು ಈ ಸಂಗತಿಗಳನ್ನು ಗಮನಿಸಿದಾಗ ಪ್ರತಿಯೊಬ್ಬ ವ್ಯಕ್ತಿಗೂ ವಿಶಿಷ್ಟ ಶಕ್ತಿಗಳು ಇರುತ್ತವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಕಂಡುಕೊಂಡು ಬಳಸಿದಾಗ ಅದು 'ಪುರುಷಾಯತ್ತ' ಎನಿಸುತ್ತದೆ. ಪುರುಷಾಯತ್ತದಲ್ಲೂ ಎರಡು ನೆಲೆಗಳುಂಟು. ಮೊದಲನೆಯದು 'ಸ್ವಾರ್ಥಪುರುಷಾಯತ್ತ', ಎರಡನೆಯದು 'ಪರಾರ್ಥಪುರುಷಾಯತ್ತ.'

ಸ್ವಾರ್ಥಪುರುಷಾಯತ್ತವು ಸ್ವಾಭಿಮುಖಿಯಾಗಿರುತ್ತದೆ. ಅದು ವ್ಯಕ್ತಿಯೊಬ್ಬನ ಹಿರಿಮೆಯನ್ನು ಮಾತ್ರ ಎತ್ತಿತೋರಿಸುತ್ತದೆ. ಉದಾಹರಣೆಗೆ ಪುಲಿಕೇಶಿ, ಎರಡನೆಯ ಕೃಷ್ಣ ಭೂವಿಸ್ತರಣೆ ಮಾಡಿದ್ದಾಗಲಿ, ಶತ್ರುಗಳನ್ನು ಜಯಗೊಳಿಸಿ ಕೀರ್ತಿಪತಾಕೆಯನ್ನು ಹಾರಿಸಿದ್ದು 'ಸ್ವಾರ್ಥಪುರುಷಾಯತ್ತ'ವೇ. ಇಲ್ಲಿ ತನ್ನದು, ತನ್ನಿಂದ ಆದುದು ಎಂಬ ಭಾವವೇ ಪ್ರಧಾನವಾಗಿರುತ್ತದೆ. ಆದರೆ, 'ಪರಾರ್ಥಪುರುಷಾಯತ್ತ'ವು ಇದಕ್ಕಿಂತ ಬೇರೆಯಾದುದು. ಅಶೋಕ ಚಕ್ರವರ್ತಿ ಕಳಿಂಗದ ಮೇಲೆ ಯುದ್ಧ ಸಾರಿದಾಗ ಸ್ವಾರ್ಥಪುರುಷಾಯತ್ತವೇ ಅವನನ್ನು ಹಿಡಿದು ನಡೆಸಿತ್ತು. ಅನಂತರ ಯುದ್ಧದಿಂದ ಆದ ಸಾವು–ನೋವುಗಳು ಅವನಲ್ಲಿ ಪರಾರ್ಥಪುರುಷಾಯತ್ತದ ಕಡೆ ತಿರುಗಲು ಸಾಧ್ಯವಾಯಿತು. ಯುದ್ಧಮುಖಿಯಾಗಿದ್ದ ಅವನು ಶಾಂತಮುಖಿಯಾದುದು ಪರಾರ್ಥಪುರುಷಾಯತ್ತದ ಕಾರಣದಿಂದಾಗಿಯೇ. 'ಪುರುಷ'ನಿಗೆ ಸಾಧ್ಯವಾದುದು ಯಾವುದೂ ಇಲ್ಲ ಎಂದು ಒಮ್ಮೊಮ್ಮೆ ಬೀಗುವುದುಂಟು. ಆದರೆ, ಅದು ಅವನ ಅಹಮಿಕೆಯ ಮೇಲೆ ಪೆಟ್ಟುಕೊಡುತ್ತದೆ. ಸ್ವಾರ್ಥಪುರುಷಾಯತ್ತವು ಅವನಲ್ಲಿ ಅಹಮಿಕೆಯನ್ನೊ ತನ್ನಿಂದ ಮಾತ್ರ ಇದು ಸಾಧ್ಯವಾಯಿತೆಂದೊ ಎಂಬ ಭಾವ ಬೆಳೆಯುವುದುಂಟು. ಆದರೆ, ಬದುಕಿನ ವಿಲಕ್ಷಣ ಪ್ರಸಂಗಗಳಲ್ಲಿ 'ಸ್ವಾರ್ಥಪುರುಷಾಯತ್ತ'ವು ಸಂಸ್ಕೃತಿಮುಖಿಯಾಗದೆ ಅವನತಮುಖಿಯಾಗುವುದೇ ಹೆಚ್ಚು.

ನಮ್ಮ ಸಾಹಿತ್ಯಕೃತಿಗಳಲ್ಲಿ ಸ್ವಾರ್ಥಪುರುಷಾಯತ್ತ ಮತ್ತು ಪರಾರ್ಥಪುರುಷಾಯತ್ತ ಕಾಣಿಸಿಕೊಳ್ಳುವುದುಂಟು. ಲೌಕಿಕ ಮತ್ತು ಆಗಮಿಕ ಎಂಬೆರಡು ಪ್ರತಿಮೆಗಳಲ್ಲಿ ಈ ಸಂಗತಿಯನ್ನು ನಾವು ಕಾಣುತ್ತೇವೆ. ಸ್ಥೂಲವಾಗಿ ಹೇಳುವುದಾದರೆ; ಕವಿಕೃತಿಯು ಸ್ವಾರ್ಥದಿಂದ ಪರಾರ್ಥದ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಇದು ಲೋಕದ ವಿಲಕ್ಷಣ ಸಂಗತಿಗಳನ್ನು ಚೆನ್ನಾಗಿ ನಿರೂಪಿಸುತ್ತದೆ. ಹಿಂಸೆಯು ಸ್ವಾರ್ಥಪುರುಷಾಯತ್ತವಾದರೆ; ಅಹಿಂಸೆಯು ಪರಾರ್ಥಪುರುಷಾಯತ್ತವೇ ಸರಿ. ಪಾಪವು ಪುರುಷಾಯತ್ತದ ಅಧೋಮುಖಿಯ ಸಂಕೇತವಾದರೆ; ಪುಣ್ಯವು ಅದೇ ಪುರುಷಾಯತ್ತದ ಊರ್ಧ್ವಮುಖಿ ಸಂಕೇತವಾಗುತ್ತದೆ.

ಹರಿಹರನು ಶಿವನ ಪೂಜೆಗಾಗಿ ಹೂಗಳನ್ನು ಪಡೆಯಲು ಹೂತೋಟದ ಬಳಿಗೆ ಹೋಗುತ್ತಾನೆ. ಅವನು ಪ್ರತಿಯೊಂದು ಗಿಡದ ಮುಂದೆ ನಿಂತು ಹೂಗಳನ್ನು ಕೀಳದೆ, ಅವನು ಪಡೆಯುತ್ತಾನೆ. ಅವುಗಳಿಗೆ ತನ್ನ ಉಸಿರನ್ನೂ ತಾಗಿಸದೆ; ಹೂಗಳನ್ನು ಹರಿಹರ ಸಂಗ್ರಹಿಸುತ್ತಾನೆ. ಇದು 'ಪರಾರ್ಥಪುರುಷಾಯತ್ತ'ದ ಒಳಮುಖ. ನಮ್ಮ ಕಾಲದ ಮಹಾತ್ಮ ಗಾಂಧೀಜಿಯವರು ಬ್ರಿಟಿಷರನ್ನು ಭಾರತದಿಂದ ಹೊರಕ್ಕೆ ಕಳಿಸಿದ್ದು ಅಹಿಂಸಾರೂಪಿ ಸಂಕೇತದಿಂದಲೇ. ದೇಶ ಸ್ವಾತಂತ್ರ್ಯ ಪಡೆದದ್ದು ಪುರುಷಾಯತ್ತದ ಫಲವಾಗಿಯೇ. ಮಹಾತ್ಮಾಜಿ ಅವರಿಗೆ ಜನ–ದೇಶ ಮುಖ್ಯವಾಗಿತ್ತೇ ಹೊರತು; 'ಸ್ವಾರ್ಥ' ಲೇಪಿತ ಗುಣ ಕಿಂಚಿತ್ತೂ ಅವರಲ್ಲಿ ಇರಲಿಲ್ಲ. ಅವರು ಕಂಡುಕೊಂಡ ಪುರುಷಾಯತ್ತ ಸ್ವೈರತೆಗೆ ಅವಕಾಶ ಕೊಡಲಿಲ್ಲ. ಅಲ್ಲಿ ಇದ್ದದ್ದು ಅದ್ವಯಜ್ಞಾನ ಎಂಬುದನ್ನು ನಾವು ಮರೆಯುವಂತಿಲ್ಲ! ಭೇದವು ಸ್ವಾರ್ಥ ಪುರುಷಾಯತ್ತದ ಗುಣವಾದರೆ; ಅಭೇದವು ಪರಾರ್ಥಪುರುಷಾಯತ್ತದ ಗುಣವೆಂಬುದನ್ನು ನಾವು ಗಮನಿಸಬೇಕು. ಆಗ ಭೇದ, ಮತ್ಸರ, ಸ್ವೈರತೆಗಳು ಗೈರುಹಾಜರಿಯಾಗಿ, ಅಭೇದ, ವಿರ್ಮತ್ಸರತ್ವ, ಶಾಂತಗುಣವು ಮೇಲುಗ್ಗೆ ಪಡೆಯುತ್ತವೆ. ಹೀಗಾಗಿ, ಪರಾರ್ಥ 'ಪುರುಷಾಯತ್ತ'ವು ಮಾನವ ಜನಾಂಗಕ್ಕೆ ನಿರಂತರ ದತ್ತವಾಗುತ್ತಲೇ ಇರುತ್ತದೆ.

■ ಪುರಂಜೀವಿ

## ಮಾತೇ ಮುತ್ತು

- ಧರ್ಮದ ಇರುವಿಕೆಯಲ್ಲಿ ಮನುಷ್ಯ ಇಷ್ಟೊಂದು ದುಷ್ಟನಾಗಿರುವಾಗ, ಧರ್ಮವೇ ಇಲ್ಲದಿದ್ದರೆ ಅವನು ಏನಾಗಬಹುದಿತ್ತು?

  –ಬೆಂಜಮಿನ್ ಫ್ರಾಂಕ್ಲಿನ್

- ಶ್ರೇಷ್ಠ ಕೊಡುಗೆ; ಆರೋಗ್ಯ. ಶ್ರೇಷ್ಠ ಸಂಪತ್ತು; ಸಂತೃಪ್ತಿ. ಶ್ರೇಷ್ಠ ಸಂಬಂಧ; ಪ್ರಾಮಾಣಿಕತೆ.

  –ಗೌತಮಬುದ್ಧ

- ನೀವು ಮಾಡಿದ ತಪ್ಪಿನ ಅರಿವಾದಾಗ ತಿದ್ದಿಕೊಳ್ಳಲು ಕೂಡಲೇ ಯತ್ನಿಸಿ.

  –ದಲೈಲಾಮ

- ಸಂಪ್ರದಾಯದ ಬಾವಿಯಲ್ಲಿ ತೇಲುವುದು ಒಳ್ಳೆಯದು. ಅದರಲ್ಲಿ ಮುಳುಗುವುದು ಆತ್ಮಹತ್ಯೆ.

  –ಗಾಂಧೀಜಿ

- ಒಳ್ಳೆಯದನ್ನು ವರ್ಣಿಸುವಾಗ ಮಾತು ಹೆಚ್ಚಾಗಲಿ. ಅಲ್ಲದ್ದನ್ನು ಕಂಡಾ ಮಾತು ಕೊಂಚವಾಗಲಿ.

  –ಬಿಎಂಶ್ರೀ

- ಎಂತಹ ಕಟು ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿ ಆಗಿರೋ ರಹಸ್ಯ.

  –ದ.ರಾ. ಬೇಂದ್ರೆ

- ನಿನ್ನ ನೆರೆಹೊರೆಯವರನ್ನು ಪ್ರೀತಿಸು. ದೇವರನ್ನು ಪೂರ್ಣ ಮನಸ್ಸಿನಿಂದ, ಆತ್ಮನಿಂದ, ಹಾಗೂ ಸತ್ವದಿಂದ ಆರಾಧಿಸು.

  –ಏಸು ಕ್ರಿಸ್ತ